# ಶ್ರೀಮಾತೆಯವರ ಪತ್ರಗಳು – ೧೦

ಅನುವಾದ: **ಪ್ರವ್ರಾಜಿಕಾ ಧರ್ಮಪ್ರಾಣಾ**

### ಪತ್ರ – ೪೬

೧.೩.೧೯೦೯

ತಾಯಿ, ದೇವಮಾತಾ — ನೀನು ನನ್ನ ಮಗಳು,

ನಿನಗೆ ಶ್ರೀ ಶ್ರೀ ಠಾಕೂರರಲ್ಲಿ ಇಷ್ಟೊಂದು ಧೃಢ ಭಕ್ತಿಯುಂಟಾಗಿದೆ ಎಂಬುದನ್ನು ಕೇಳಿ ನನಗೆ ತುಂಬಾ ಸಂತೋಷವಾಯಿತು. ನಾನು ನಿನಗೆ ಆಶೀರ್ವಾದ ಮಾಡುತ್ತಿದ್ದೇನೆ — ನಿನಗೆ ಅಪಾರ ಭಕ್ತಿಯುಂಟಾಗಲಿ ಎಂದು — ಇದುವೇ ನನ್ನ ಪ್ರಾರ್ಥನೆ. ನೀನು ದೀರ್ಘಾಯುವಾಗು ಮತ್ತು ನನ್ನ ಮಕ್ಕಳೊಂದಿಗೆ ಸದಾ ಆನಂದದಲ್ಲಿ ಮಗ್ನಳಾಗಿರು. ಮತ್ತೆ ತಾಯಿ, ೨೦ ರೂಪಾಯಿ ನಾನು ಸ್ವೀಕರಿಸಿರುವೆ.

ಪರಮಾನಂದನಿಗೆ ನನ್ನ ಆಶೀರ್ವಾದ ತಿಳಿಸು. ನೀನು ಅವನನ್ನು ನಿನ್ನ ಮಗನಂತೆ ಕಂಡು, ಮಗನಂತೆ ಪಾಲಿಸುತ್ತಿರುವೆ ಎಂದು ಕೇಳಿ ನಾನು ಸಂತುಷ್ಟಳಾದೆ. ನಾನು ಚೆನ್ನಾಗಿದ್ದೇನೆ.

ಇತಿ ನಿನ್ನ ಸ್ನೇಹಮಯಿ ಮಾತಾದೇವಿ

***ಪತ್ರ ಪಡೆದವರ ಹೆಸರು***
*ಸೋದರಿ ದೇವಮಾತಾ*
*(ಅಮೆರಿಕಾದ ನಾಗರಿಕಳಾದ ಲೋರಾ ಗ್ಲೇನ್ )*

### ಪತ್ರ – ೪೭

ಓಂ ರಾಮಕೃಷ್ಣ ಜಯತಿ

೧.೩.೧೯೦೯

ಪರಮ ಶುಭಾಶೀರ್ವಾದವನ್ನು ಮೊದಲು ತಿಳಿಸಿ,

ಆಮೇಲೆ ವಿಶೇಷವೇನೆಂದರೆ

ಪ್ರೀತಿಯ ಮಗೂ, ಇಂದು ಸರಿಯಾದ ಸಮಯಕ್ಕೆ ನಿನ್ನ ಪತ್ರದ ಜೊತೆ ೨೦ ರೂಪಾಯಿ ಮನಿಯಾರ್ಡರ್ ನಾನು ಸ್ವೀಕರಿಸಿದೆ. ಮತ್ತು ರಾಖಾಲ್ ಅಲ್ಲಿಯೇ ಇದ್ದಾನೆಂದು ಕೇಳಿ ತುಂಬಾ ಸಮಾಧಾನವಾಯಿತು. ರಾಖಾಲ್‌ನ ಜೊತೆಯಲ್ಲಿ ನೀವು ಆನಂದಿಸಿರಿ. ನನ್ನ ರಾಖಾಲ್ ದೀರ್ಘಾಯುವಾಗಿರಲಿ, ಅಲ್ಲದೆ ನೀವೆಲ್ಲರೂ ದೀರ್ಘಾಯುವಾಗಿ ಇರಿ. ಇದರಿಂದಲೇ ನನಗೆ ಆನಂದ. ನೀವೆಲ್ಲರೂ ನನ್ನ ಆಶೀರ್ವಾದಗಳನ್ನು ಸ್ವೀಕರಿಸಿ. ನಾನು ಒಂದು ರೀತಿಯಲ್ಲಿ ಸುಮಾರಾಗಿ ಚೆನ್ನಾಗಿದ್ದೇನೆ. ಮನೆಯಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

ಇತಿ ೧೩೧೬ನೇ ವರ್ಷ
೧೫ನೇ ದಿನ, ಫಾಲ್ಗುಣ, ಶನಿವಾರ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*ಸ್ವಾಮಿ ರಾಮಕೃಷ್ಣಾನಂದ*
*ಮದ್ರಾಸ್*

### ಪತ್ರ – ೪೮

ಶ್ರೀ ಶ್ರೀ ದುರ್ಗೆಯ ಕೃಪೆ

೨೭.೩.೧೯೦೯

ಪ್ರೀತಿಯ ಮಗೂ,

ನೀನು ಕಳುಹಿಸಿರುವ ಒಂದು ಜೋಡಿ ಸೀರೆ ಸಿಕ್ಕಿತು. ಅದನ್ನು ನಾನು ಉಪಯೋಗಿಸುವೆನು. ಠಾಕೂರರು ನಿನಗೆ ಮಂಗಳವನ್ನುಂಟುಮಾಡಲಿ. ಶರತ್ ಮಹಾರಾಜ್, ಗೋಲಾಪ್ ತಾಯಿ, ಜೋಗೇನ್ ಇಲ್ಲಿಗೆ ಬಂದಿದ್ದಾರೆ ಮತ್ತು ಚೆನ್ನಾಗಿದ್ದಾರೆ. ನಿನ್ನ ಯೋಗಕ್ಷೇಮದ ಬಗ್ಗೆ ಬರೆಯಬೇಕು.

ಇತಿ ೧೨, ಚೈತ್ರ

***ಪತ್ರ ಪಡೆದವರ ಹೆಸರು ಮತ್ತು ವಿಳಾಸ***
*ಪರಮ ಪ್ರೀತಿಯ*
*ಶ್ರೀಮಾನ್ ನಿರ್ಮಲಚಂದ್ರ ದಾಸ್ ಘೋಷ್*
ಪ್ರೀತಿಯ ಮಗೂ, ಸುರಕ್ಷಿತವಾಗಿರು.
*ಕಲ್ಕತ್ತಾ ಗ್ರೇ ಸ್ಟ್ರೀಟ್, ನಂ ೧೦೭,*
*ಶ್ರೀಕುಮಾರ್ ಕುಮಾರ್ ಕೃಷ್ಣ*
*ಬಹದೂರ್ ಅವರ ಮನೆ, Cal*

### ಪತ್ರ – ೪೯

UDBODHAN OFFICE
12,13 Gopal Chandra Neogi's Lane
Bagh-bazar P.O Calcatta

೨ನೇ ಆಶ್ವಯುಜ, ೧೩೧೬, ೧೯. ೯. ೧೯೦೯

ಶುಭವಾಗಲಿ,

ಮಗೂ, ನಿನ್ನ ಪತ್ರ ಸರಿಯಾದ ಸಮಯಕ್ಕೆ ಸಿಕ್ಕಿತು. ನೀನು ಮೊದಲಿಗಿಂತಲೂ ಚೆನ್ನಾಗಿರುವೆ ಎಂದು ಕೇಳಿ ಸಮಾಧಾನವಾಯಿತು. ಮಗು, ಜಯಲಕ್ಷ್ಮಿಯ ವಿಳಾಸವನ್ನು ನನಗೆ ತಿಳಿಸು. ಅವಳು ಒಂದು ಪತ್ರ ಬರೆದಿದ್ದಾಳೆ. ವಿಳಾಸ ಇಲ್ಲದ್ದರಿಂದ ಅದಕ್ಕೆ ಉತ್ತರ ಹಾಗೂ ಸಾಮಾನುಗಳನ್ನು ಕಳುಹಿಸಲು ಆಗುತ್ತಿಲ್ಲ. ಇಲ್ಲಿ ಒಂದು ರೀತಿ ಎಲ್ಲವೂ ಕ್ಷೇಮ. ನನ್ನ ಆಶೀರ್ವಾದ ತೆಗೆದುಕೋ.

ಇತಿ, ನಿನ್ನ ತಾಯಿ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*Swami Ramakrishnanandaji Maharaj*
*The Ramakrishna Mission*
*Mylapore, Madras*

**ಪತ್ರ – ೫೦**

ಶ್ರೀ ಶ್ರೀ ಗುರುದೇವ
ಶ್ರೀ ಶ್ರೀ ಚರಣದಲ್ಲಿ ಭರವಸೆ

೩೦. ೯. ೧೯೦೯
ಬಾಗ್‌ಬಜಾರ್ , ಗುರುವಾರ

ಶುಭವಾಗಲಿ.

ಮಗು ಶಶಿ, ನಿನ್ನ ಪತ್ರ ಸರಿಯಾದ ಸಮಯಕ್ಕೆ ಸಿಕ್ಕಿತು. ಅದರಲ್ಲಿ ಜಯಲಕ್ಷ್ಮಿಯ ವಿಳಾಸ ಸಿಕ್ಕಿ, ಅವಳಿಗೆ ಪತ್ರ ಮೊದಲಾದವನ್ನು ಕಳುಹಿಸಿರುವೆ. ಇಂದು ಅವಳ ಇನ್ನೊಂದು ಪತ್ರ ಸಿಕ್ಕಿತು. ಅದಕ್ಕೂ ಉತ್ತರ ಕಳುಹಿಸಿದ್ದೇನೆ. ನಾನು ಕಾರ್ತಿಕ ತಿಂಗಳ ಮಧ್ಯೆ ಯಾವಾಗಲಾದರೂ ಜಯರಾಂಬಾಟಿಗೆ ಹೋಗುತ್ತೇನೆ. ಅಲ್ಲಿ ಜಯಲಕ್ಷ್ಮಿಯ ಇಂಗ್ಲಿಷ್ ಪತ್ರ ಓದಲು ಅಥವಾ ಅದರ ಉತ್ತರ ಬರೆಯಲು ಸಾಧ್ಯವಾಗುವಂತಹ ಜನರು ಯಾರೂ ಇಲ್ಲ. ಆದುದರಿಂದ ಅವಳಿಗೆ ಬರೆದು ಕಳುಹಿಸಿದ್ದೇನೆ, ನಿನ್ನ ಬಳಿ ನನ್ನ ಸಮಾಚಾರ ತಿಳಿದುಕೊಳ್ಳಲೆಂದು. ನೀನು ಬಂಗಾಳಿಯಲ್ಲಿ ನನ್ನಿಂದ ಸಮಾಚಾರ ತೆಗೆದುಕೊಳ್ಳಬಹುದು. ಅದರ ಅನುವಾದವನ್ನು ಮಾಡಿ ಕೊಡು. ನನ್ನ ಶರೀರ ಪರವಾಗಿಲ್ಲ. ನೀನು ಚೆನ್ನಾಗಿರುವೆ ಎಂದು ಆಶಿಸುತ್ತೇನೆ. ನನ್ನ ಆಶೀರ್ವಾದವನ್ನು ತೆಗೆದುಕೋ.

ಇತಿ, ನಿನ್ನ ತಾಯಿ.

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*The Swami Ramakrishnananda*
*The Ramakrishna Mission*
*Mylapore, Madras*

**ಪತ್ರ – ೫೧**

ಶ್ರೀ ಶ್ರೀ ಗುರುದೇವ
ಶ್ರೀ ಚರಣದಲ್ಲಿ ಭರವಸೆ

೧೦. ೧೨. ೧೯೦೯
ಜಯರಾಂಬಾಟಿ, ೨೪ ಆಗ್ರಹಾಯಣ

ಮಂಗಳವಾಗಲಿ.

ಮಗೂ, ನಿನ್ನ ಪತ್ರದಲ್ಲಿ ನೀನು ನಿರ್ವಿಘ್ನವಾಗಿ ಅಲ್ಲಿಗೆ ತಲುಪಿದೆ ಎಂದು ತಿಳಿದು ಸಮಾಧಾನವಾಯಿತು. ನನ್ನ ಕಾಲಿನ ವಾತ ೧೫ ಆಣೆ ಭಾಗದಷ್ಟು ಕಡಿಮೆಯಾಗಿದೆ. ಪ್ರತಿದಿನ ಶಾಖ ಕೊಡುವುದು, ತಿಕ್ಕುವುದು, ಬ್ಯಾಂಡೇಜ್ ಕಟ್ಟುವುದು ಇತ್ಯಾದಿ ನಡೆಯುತ್ತಿದೆ. ಇಲ್ಲಿ ಇನ್ನೆಲ್ಲವೂ ಕ್ಷೇಮ. ನನ್ನ ಆಶೀರ್ವಾದ ತೆಗೆದುಕೋ. ಜಯಲಕ್ಷ್ಮಿಯ ಪತ್ರ ಬಂದರೆ ಅದನ್ನು ಬಂಗಾಳಿಗೆ ಅನುವಾದ ಮಾಡಿ ಇಲ್ಲಿಗೆ ಕಳುಹಿಸು. ಮತ್ತು ಆಗಾಗ ನಿಮ್ಮೆಲ್ಲರ ಸಮಾಚಾರ ತಿಳಿಸಿ ನೆಮ್ಮದಿಯನ್ನು ಕೊಡಬೇಕು.

ಇತಿ ನಿಮ್ಮೆಲ್ಲರ ತಾಯಿ.

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*The Ramakrishnananda*
*The Ramakrishna Mission*
*Mylapore, Madras*

**ಪತ್ರ – ೫೨**

ಓಂ ರಾಮಕೃಷ್ಣ ಜಯತಿ

೧೮. ೧. ೧೯೧೦
೧೩೧೬ನೇ ವರ್ಷ, ೫ನೇ ಮಾಘ, ಮಂಗಳವಾರ
ರಾತ್ರಿ ಬರೆದೆ

ಪರಮ ಶುಭಾಶೀರ್ವಾದವನ್ನು ಮೊದಲು ತಿಳಿಸಿ,

ವಿಶೇಷವೇನೆಂದರೆ,

ಮಗೂ, ನಿನ್ನ ಪತ್ರ ಲಭಿಸಿ ಅನೇಕ ದಿನಗಳಾದವು.ಆದರೆ ಕೆಲಸದ ನಿಮಿತ್ತ ಉತ್ತರ ಬರೆಯಲಾಗಲಿಲ್ಲ. ಅದನ್ನು ಮನಸ್ಸಿಗೆ ಹಚ್ಚಿಕೊಳ್ಳಬೇಡ. ನನಗೆ ಕಾಲಲ್ಲಿ ನೋವು ಬಂದಿತ್ತು. ಸದ್ಯ ತುಸು ಚೆನ್ನಾಗಿದ್ದೇನೆ. ನನಗಾಗಿ ನೀವು ಚಿಂತೆ ಮಾಡುವುದು ಬೇಡ. ನೀನು ನನ್ನ ಆಶೀರ್ವಾದ ತೆಗೆದುಕೋ. ಹಾಗೂ ರುದ್ರ ಚೈತನ್ಯನಿಗೆ ಹಾಗೂ ಬ್ರಹ್ಮಚಾರಿಗೆ ನನ್ನ ಆಶೀರ್ವಾದ ತಿಳಿಸು. ವಾಸುದೇವ ರಾವ್ ಎಂಬ ಹೆಸರಿನ ನನ್ನ ಒಬ್ಬ ಭಕ್ತ, ಅವನು ನನಗೆ ಎರಡು ಸಲ ೨೦ ರೂಪಾಯಿ ಕಳುಹಿಸಿದ್ದನು. ಇನ್ನೊಂದು ಸಲ ೩೦ ರೂಪಾಯಿ ಕಳುಹಿಸಿದ್ದನು. ಎಲ್ಲ ಹಣವೂ ಸಿಕ್ಕಿದೆ. ಮತ್ತು ಆ ಹಣವನ್ನು ಠಾಕೂರರ ಸೇವೆಗಾಗಿ ಖರ್ಚು ಮಾಡಿದ್ದೇನೆ. ಅವನಿಗೆ ನನ್ನ ಆಶೀರ್ವಾದ ತಿಳಿಸಬೇಕು ಹಾಗೂ ಅದನ್ನು ಭಕ್ತಿಪೂರ್ವಕ ಸ್ವೀಕರಿಸಲು ಹೇಳಬೇಕು. ಮತ್ತೆ ಶಶಿಗೆ ನನ್ನ ಆಶೀರ್ವಾದ ತಿಳಿಸು. ಅಲ್ಲದೆ ನಿಮ್ಮೆಲ್ಲರ ಯೋಗ ಕ್ಷೇಮದ ಸಮಾಚಾರ ನೀಡಿ, ನನ್ನನ್ನು ಆನಂದದಿಂದಿರಿಸಬೇಕು. ನಿಮ್ಮೆಲ್ಲರ ಸುಸ್ಥಿತಿಯ ಸಮಾಚಾರ ನೀಡಿದರೆ ನಾನು ಎಷ್ಟೊಂದು ಆನಂದದಿಂದ ಇರುತ್ತೇನೆ ಎಂದರೆ ಅದನ್ನು ಹೇಗೆ ಬರೆದು ತಿಳಿಸಲಿ! ಪ್ರೀತಿಯ ಮಗು, ಮಧ್ಯೆ ಮಧ್ಯೆ ನನಗೆ ಒಂದು ಪತ್ರ ಬರೆದು ಕಳುಹಿಸಬೇಕು. ಹಾಗಾದರೆ ನಾನು ತುಂಬಾ ಆನಂದದಿಂದ ಇರುತ್ತೇನೆ. ಇತಿ, ಇಲ್ಲಿ ಎಲ್ಲವೂ ಕ್ಷೇಮ. ನಿನ್ನ ಮಂಗಳಕ್ಕಾಗಿ ಠಾಕೂರರಲ್ಲಿ ನಿತ್ಯವೂ ಪ್ರಾರ್ಥಿಸುತ್ತಿದ್ದೇನೆ. ಕೊಲ್ಕತ್ತದಲ್ಲಿ ಎಲ್ಲರೂ ಚೆನ್ನಾಗಿದ್ದಾರೆ.

ನಿಮ್ಮೆಲ್ಲರ ಶುಭಾಕಾಂಕ್ಷಿ, ಮಾತೃದೇವಿ.

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*Br. Surendra Vijaya*
*C/o H.H.The Swami Ramakrishnanandaji*
*Sri Ramakrishna Mission,*
*Mylapore,Madras*

**ವಿವರಣೆ:** ಸುರೇಂದ್ರ, ವಿಜಯ ಇವರು ಸ್ವಾಮಿ ರಾಮಕೃಷ್ಣಾನಂದರ ಜೊತೆಯಲ್ಲಿ ಉದ್ಬೋಧನದಲ್ಲಿದ್ದ ಶ್ರೀಮಾತೆಯವರ ಬಳಿಹೋಗಿ ಸಂನ್ಯಾಸವನ್ನು ನೀಡಲು ಪ್ರಾರ್ಥಿಸಿದ್ದರು. ಆಮೇಲೆ ಅವರು ಶ್ರೀರಾಮಕೃಷ್ಣರ ನೇರ ಶಿಷ್ಯರಿಂದಲೇ ಸಂನ್ಯಾಸ ಪಡೆದರು. ಅವರು ಮದ್ರಾಸ್ ಮಠದಲ್ಲಿ ಸ್ವಾಮಿ ರಾಮಕೃಷ್ಣಾನಂದರ ಸಹಾಯಕರಾಗಿ ಅನೇಕ ದಿನಗಳ ಕಾಲ ಕೆಲಸ ಮಾಡಿದ್ದರು.

### ಪತ್ರ ೫೩

ಓಂ ರಾಮಕೃಷ್ಣ ಜಯತಿ

೬.೨.೧೯೧೦

ಪರಮ ಶುಭಾಶೀರ್ವಾದವನ್ನು ಮೊದಲು ತಿಳಿಸಿ,

ವಿಶೇಷವೇನೆಂದರೆ,

ನಿನ್ನ ಪತ್ರ ನನಗೆ ಸಿಕ್ಕಿ ಬಹಳ ಆನಂದವಾಯಿತು. ನಿನಗೆ ನನ್ನ ಆಶೀರ್ವಾದ. ಮಗೂ, ನೀನು ಜಯಲಕ್ಷ್ಮಿಗೆ ಪತ್ರ ಬರೆದಿರುವೆ, ಇದನ್ನು ಕೇಳಿ ತುಂಬಾ ಸಮಾಧಾನವಾಯಿತು. ಆಮೇಲೆ ರಾಖಾಲ್ (ಮಹಾರಾಜ್) ಕೊಠಾರ್‌ನಲ್ಲಿ ಇದ್ದಾರೆ (ಇದ್ದಾನೆ) ಮತ್ತು ಶಾರೀರಿಕವಾಗಿ ಸುಸ್ಥಿಯಲ್ಲಿ ಇದ್ದಾರೆ (ಇದ್ದಾನೆ) – ಇದನ್ನು ಕೇಳಿ ನಾನು ಸಂತುಷ್ಟಳಾದೆ. ಅವನಿಗೆ ನನ್ನ ಆಶೀರ್ವಾದವನ್ನು ತಿಳಿಸು. ಸುರೇಂದ್ರ, ವಿಜಯ ಮುಂತಾದವರು ಕಾಶೀಧಾಮಕ್ಕೆ ಹೋಗಿದ್ದಾರೆ ಮತ್ತೆ ಅವರ (ಅವನ) ತಾಯಿ ಹೇಗಿದ್ದಾರೆ? ಅವರಿಬ್ಬರಿಗೂ ನನ್ನ ಆಶೀರ್ವಾದಗಳನ್ನು ತಿಳಿಸು. ತುಳಸಿ, ಜಿತೇನ್, ಚೆನ್ನಾಗಿದ್ದಾರೆಂದು ಕೇಳಿ ಸಮಾಧಾನವಾಯಿತು. ಅವರಿಗೆ ನನ್ನ ಆಶೀರ್ವಾದಗಳನ್ನು ತಿಳಿಸು. ದೇವಮಾತಾಳಿಗೆ ನನ್ನ ಆಶೀರ್ವಾದ ತಿಳಿಸು.ರುದ್ರಚೈತನ್ಯನಿಗೂ ನನ್ನ ಆಶೀರ್ವಾದ (ಹೇಳು). ನಾನು ಸದ್ಯ ಚೆನ್ನಾಗಿದ್ದೇನೆ. ಆದರೆ ಎಡಗಾಲಿನಲ್ಲಿ ೭-೮ ದಿನಗಳಿಂದ ಒಂದು ನೋವು ಹಿಡಿದುಕೊಂಡಿದೆ. ಅದಕ್ಕಾಗಿ ಚಿಂತಿಸಬೇಡ. ಉಳಿದಂತೆ ಸದ್ಯ ಎಲ್ಲವೂ ಕ್ಷೇಮ. ನಿಮ್ಮೆಲ್ಲರ ಯೋಗಕ್ಷೇಮ ತಿಳಿಸಿಕ್ಕೆ ಮಧ್ಯೆ ಮಧ್ಯೆ ನನಗೆ ಬರೆ. ಪ್ರಕಾಶನನ್ನು ನಿಮ್ಮ ಜೊತೆಯಲ್ಲಿರಿಸು. ಕಾರಣ, ಅವನು ಸಂನ್ಯಾಸಿಯಾಗಿದ್ದಾನೆ — ಅದಕ್ಕಾಗಿ ಹೇಳುತ್ತಿದ್ದೇನೆ. ನಿಮ್ಮೆಲ್ಲರ ಜೊತೆ ಇದ್ದರೆ ಅವನಿಗೆ ಜ್ಞಾನವುಂಟಾಗುವುದು. ನಿನಗೆ ಠಾಕೂರರು ರಕ್ಷಣೆ ಮಾಡುವರು.

ಇತಿ ೧೩೧೬ನೇ ವರ್ಷ, ಮಾಘ ೨೪ನೇ ದಿನ, ರವಿವಾರ

ಕಲ್ಕತ್ತಾದಲ್ಲಿ ಉಳಿದ ಮಕ್ಕಳೆಲ್ಲರೂ ಚೆನ್ನಾಗಿದ್ದಾರೆ.

ನಿನ್ನ ಶುಭಮಯಿ ಮಾತಾ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*

*The Ramakrishnanandaji*
*Sri Ramakrishna Mission*
*Mylapore, Madras*

### ಪತ್ರ ೫೪

ಓಂ ರಾಮಕೃಷ್ಣ ಜಯತಿ

೧೪.೨.೧೯೧೦

ಪ್ರೀತಿಯ ಮಗೂ,

ನಿನ್ನ ಪತ್ರ ತಲುಪಿ, ನಾನು ಇನ್ನಿಲ್ಲದಷ್ಟು ಸಮಾಧಾನಪಟ್ಟೆ. ಸ್ವಾಮಿಜಿಯ ಉತ್ಸವಕ್ಕೆ ಸಂಕೀರ್ತನೆ (ನಡೆದಿತ್ತು). ದರಿದ್ರ ಜನರಿಗೆ ನೀನು ಬೇಕಾದಷ್ಟು ತಿನ್ನಿಸಿರುವೆ... ಇದನ್ನು ಕೇಳಿ ನಾನು ತುಂಬಾ ಸಂತುಷ್ಟಳಾದೆ, ಹಾಗೂ ನಿಮಗೆಲ್ಲರಿಗೂ ಆಶೀರ್ವಾದ ಮಾಡಿದೆ. ಸುರೇಂದ್ರ, ವಿಜಯ ಕಾಶೀಧಾಮದಲ್ಲಿ ಇದ್ದಾರೆಂದು ಕೇಳಿದೆ. ಅವನ ತಾಯಿಯ ಆರೋಗ್ಯ ಈಗಲೂ ವಾಸಿಯಾಗಿಲ್ಲ ಅನ್ನಿಸುತ್ತಿದೆ. ಅವರಿಗೆ ನನ್ನ ಆಶೀರ್ವಾದ ತಿಳಿಸು. ಮತ್ತು ರುದ್ರಚೈತನ್ಯನಿಗೂ ತಿಳಿಸು. ಕಲ್ಕತ್ತಾದ ಮಕ್ಕಳೆಲ್ಲರೂ ಚೆನ್ನಾಗಿದ್ದಾರೆ. ಇಂದು ನನಗೆ ಸಮಾಚಾರ ಸಿಕ್ಕಿತು.

ಇತಿ ೧೩೧೫ನೇ ವರ್ಷ, ಫಾಲ್ಗುಣ ೨
ಸೋಮವಾರ

ದೇವಮಾತಾಳಿಗೆ ನನ್ನ ಆಶೀರ್ವಾದವನ್ನು ತಿಳಿಸು.

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*

*The Swami Ramakrishnananda*

*Sri Ramakrishna Mission*

*Mylapore, Madras*

### ಪತ್ರ ೫೫

ಓಂ ರಾಮಕೃಷ್ಣರ ಕೃಪೆ

೨೪.೨.೧೯೧೦

ಶುಭಾಶೀರ್ವಾದವನ್ನು ಮೊದಲು ತಿಳಿಸಿ,

ವಿಶೇಷವೇನೆಂದರೆ ,

ಪ್ರೀತಿಯ ಮಗೂ, ನಿನ್ನ ಪತ್ರ ತಲುಪಿ ನಾನು ತುಂಬಾ ಆನಂದಿತಳಾದೆ. ನಾನು ಹುಷಾರಾಗಿದ್ದೇನೆ. ಮೊಣಕಾಲಿನಲ್ಲಿ ಮಾತ್ರ ಸ್ವಲ್ಪ ನೋವು ಇದೆ. ಅದರಿಂದ ಅಂತಹ ಕಷ್ಟ ಏನೂ ಇಲ್ಲ. ಆಶು ಮಹಾರಾಜ್ ಒಂದು ದಿನದ ನಂತರ ಕಲ್ಕತ್ತಾಕ್ಕೆ ಹೋಗಿದ್ದಾನೆ ಹಾಗೂ ಶಾರೀರಿಕವಾಗಿ ಚೆನ್ನಾಗಿದ್ದಾನೆ. ದೇವಮಾತಾಳ ಪತ್ರ ಸಿಕ್ಕಿತು ಮತ್ತು ಎಲ್ಲವನ್ನೂ ತಿಳಿದುಕೊಂಡೆ. ನೀನು ಅವಳಿಗೆ ನನ್ನ ಆಶೀರ್ವಾದ ತಿಳಿಸು. ಮಗನೆ, ಈಗ ತಯಾರಾದ ಗೃಹದಲ್ಲಿ ಶ್ರೀಠಾಕೂರರ ಫೋಟೋವನ್ನು ಪ್ರತಿಷ್ಠಾಪಿಸಿ, ನಿತ್ಯ ಧ್ಯಾನ ಹಾಗೂ ಪೂಜಾದಿಗಳನ್ನು ಮಾಡಬೇಕು. ನೀವು ಗೃಹವನ್ನು ನಿರ್ಮಿಸಿದ್ದರಿಂದ ನನಗೆ ಸಮಾಧಾನವಾಯಿತು. ಪರಮಾನಂದ ಸ್ವಾಮಿಗೆ ನನ್ನ ಆಶೀರ್ವಾದ ತಿಳಿಸು. ನೀನೂ ಭಕ್ತಿಪೂರ್ವಕ ಸ್ವೀಕರಿಸು. ಮತ್ತು ನನ್ನ ಚಿಕ್ಕ ಮಗಳು ದೇವಮಾತಾಳಿಗೆ ನನ್ನ ಆಶೀರ್ವಾದ ಸ್ವೀಕರಿಸಲು ಹೇಳು. ಮತ್ತು ರುದ್ರಚೈತನ್ಯನಿಗೆ ನನ್ನ ಆಶೀರ್ವಾದ ತಿಳಿಸು. ಹಾಗೂ ಉಳಿದವರಿಗೆಲ್ಲ ತಿಳಿಸು. ಇತಿ,

ಇಲ್ಲಿ ಎಲ್ಲವೂ ಕ್ಷೇಮ. ಅಲ್ಲಿಯ ಯೋಗ ಕ್ಷೇಮವನ್ನು ಬರೆದು ಸಮಾಧಾನವನ್ನು ಕೊಡು.

ವರ್ಷ ೧೩೧೬, ಫಾಲ್ಗುಣ ೧೨ನೇ ದಿನ, ಗುರುವಾರ

ನಿನ್ನ ಮಂಗಳಮಯಿ ಮಾತೃದೇವಿ

*ಪತ್ರ ಪಡೆದವರ ಹೆಸರು ಮತ್ತು ವಿಳಾಸ*
*The  Swami Ramakrishnanandajee*
*Sri Ramakrishna Mission*
*Mylapore, Madras*